**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆ: 4001/2023**

| | | |
|---|---|---|
| ಪಿರ್ಯಾದುದಾರರು | ವಿರುದ್ಧ | ಆರೋಪಿತರು |
| ಬನ್ನೂರು ಪೊಲೀಸ್ | | ಶ್ರೀಧರ ಮತ್ತು ಇತರರು |

**<u>ದೋಷಾರೋಪಣೆ</u>**

ಶ್ರೀ ಶ್ಯಾಮ್ ಪ್ರಕಾಶ್, ಬಿ.ಎ.ಎಲ್.ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತಿ.ನರಸೀಪುರ ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿತರಾದ : 1. ಶ್ರೀಧರ,
ಬಿನ್.ಲೇಟ್.ಕಾಳೇಗೌಡ,
ಸುಮಾರು 45 ವರ್ಷ,
ವಾಸ ತ್ಯಾಗರಾಜಮೊಹಲ್ಲಾ,
ಬನ್ನೂರ ಟೌನ್,
ಟಿ.ನರಸೀಪುರ ತಾಲ್ಲೂಕು.

2. ಸತೀಶ,
ಬಿನ್.ಲೇಟ್.ಕಾಳೇಗೌಡ,
ಸುಮಾರು 38 ವರ್ಷ,
ವಾಸ ತ್ಯಾಗರಾಜಮೊಹಲ್ಲಾ,
ಬನ್ನೂರ ಟೌನ್,
ಟಿ.ನರಸೀಪುರ ತಾಲ್ಲೂಕು.

3. ಸುರೇಶ,
ಬಿನ್.ಲೇಟ್.ಕಾಳೇಗೌಡ,
ಸುಮಾರು 43 ವರ್ಷ,
ವಾಸ ನಂ.413, ಆಲನಹಳ್ಳಿ ಗ್ರಾಮ,

ಟಿ.ನರಸೀಪುರ ತಾಲ್ಲೂಕು,

ಮೈಸೂರು ಜಿಲ್ಲೆ.

**<u>ನಿಮ್ಮಗಳ ಮೇಲೆ ದೋಷಾರೋಪಣೆ ಮಾಡುವುದು ಏನೆಂದರೆ,</u>**

ದಿನಾಂಕ 01.06.2022 ರಂದು ಬೆಳಿಗ್ಗೆ 8.30 ರ ವೇಳೆಯಲ್ಲಿ ತಿ.ನರಸೀಪುರ ತಾಲ್ಲೂಕು ಬನ್ನೂರು ಪೊಲೀಸ್ ಠಾಣೆ ಸರಹದ್ದು ಎಸ್.ಆರ್.ಪಿ. ರಸ್ತೆಯಿಂದ ರಾಮಸ್ವಾಮಿ ನಾಲೆಗೆ ಹೋಗುವ ರಸ್ತೆಯಲ್ಲಿರುವ ಚಾಸಾ-1 ರವರ ಬಾಬ್ತು ಭತ್ತದ ಗದ್ದೆಯಲ್ಲಿ ಚಾಸಾ-1 ಮತ್ತು 2 ರವರುಗಳು ಕೆಲಸ ಮಾಡುತ್ತಿರುವಾಗ ಅದೇ ವೇಳೆಗೆ 1 ರಿಂದ 3 ನೇ ಆರೋಪಿತರಾದ ನೀವುಗಳು ಬಂದು ಚಾಸಾ-1 ರವರ ಬಾಬ್ತು ಜಮೀನಿನಲ್ಲಿದ್ದ ತೆಂಗಿನ ಮರಗಳಲ್ಲಿ ತೆಂಗಿನ ಕಾಯಿಗಳನ್ನು ಕೀಳುತ್ತಿದ್ದಾಗ ಚಾಸಾ-1 ಮತ್ತು 2 ರವರು ನಿಮ್ಮನ್ನು ಉದ್ದೆಶಿಸಿ ಯಾಕೆ ನಮ್ಮ ಗದ್ದೆಯಲ್ಲಿ ತೆಂಗಿನ ಕಾಯಿಯನ್ನು ಕೀಳುತ್ತಿದ್ದೀರಾ ಎಂದು ಕೇಳಿದಕ್ಕೆ 1 ನೇ ಆರೋಪಿಯಾದ ನೀವು ಗದ್ದೆ ನಿಮ್ಮದು ಗದ್ದೆ ತೆವರಿನ ಮೇಲೆ ಇರುವ ತೆಂಗಿನ ಮರ ನಮ್ಮದು ಎಂದು ಹೇಳಿದ್ದು 1 ನೇ ಆರೋಪಿಯಾದ ನಿಮಗೂ ಚಾಸಾ-1 ರವರಿಗೂ ಮಾತಿಗೆ ಮಾತು ಬೆಳೆದು 1 ನೇ ಆರೋಪಿಯಾದ ನೀವು ಕೈಯಲ್ಲಿ ಹಿಡಿದಿದ್ದ ಕುಡುಗೋಲಿನಿಂದ ಚಾಸಾ-1 ರವರಿಗೆ ಹೊಡೆಯಲು ಬಂದಾಗ ಚಾಸಾ-1 ರವರು ತಪ್ಪಿಸಿಕೊಂಡಾಗ ಚಾಸಾ-1 ರವರ ಬಲಗಣ್ಣಿನ ಹತ್ತಿರ ಹಾಗೂ ಜಗಳ ಬಿಡಿಸಲು ಬಂದ ಚಾಸಾ-2 ರವರ ಎಡಗಣ್ಣಿನ ಹತ್ತಿರ ಕುಡುಗೋಲು ತಗುಲಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 2 ನೇ ಆರೋಪಿಯಾದ ನೀವು ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುವ ಉದ್ದೇಶದಿಂದ ಚಾಸಾ-1 ಮತ್ತು 2 ರವರಿಗೆ ಬೋಳಿಮಕ್ಕಳಾ, ಸೂಳೆಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 2 ನೇ ಆರೋಪಿಯಾದ ನೀವು ಚಾಸಾ–2 ರವರಿಗೆ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, 3 ನೇ ಆರೋಪಿಯಾದ ನೀವು ಚಾಸಾ–1 ಮತ್ತು 2 ರವರಿಗೆ ಇನ್ನೊಂದು ಸಾರಿ ಗದ್ದೆಯ ತೆಂಗಿನ ಮರದ ವಿಚರಕ್ಕೆ ಬಂದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿಃ 05.08.2024.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆಃ 4001/2023**

| | | |
|---|---|---|
| 1 ನೇ ಆರೋಪಿಯ ಹೆಸರು | ಃ | ಶ್ರೀಧರ, |
| ಪ್ರಾಯ | ಃ | 45 ವರ್ಷ |
| ತಂದೆ | ಃ | ಲೇಟ್.ಕಾಳೇಗೌಡ, |
| ವಾಸ | ಃ | ತ್ಯಾಗರಾಜಮೊಹಲ್ಲಾ,<br>ಬನ್ನೂರ ಟೌನ್, ಟಿ.ನರಸೀಪುರ ತಾಲ್ಲೂಕು. |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆಃ-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

ಉತ್ತರಃ-

ದಿನಾಂಕಃ 05.08.2024.

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆಃ 4001/2023**

| | | |
|---|---|---|
| 2 ನೇ ಆರೋಪಿಯ ಹೆಸರು | ಃ | ಸತೀಶ, |
| ಪ್ರಾಯ | ಃ | 38 ವರ್ಷ |
| ತಂದೆ /ಗಂಡ | ಃ | ಲೇಟ್.ಕಾಳೇಗೌಡ, |
| ವಾಸ | ಃ | ತ್ಯಾಗರಾಜಮೊಹಲ್ಲಾ,<br>ಬನ್ನೂರ ಟೌನ್, ಟಿ.ನರಸೀಪುರ ತಾಲ್ಲೂಕು. |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆಃ-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ-

ಪ್ರಶ್ನೆಃ-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?

ಉತ್ತರಃ-

ದಿನಾಂಕಃ 05.08.2024.

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**

**<u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ. ನ್ಯಾಯಾಲಯ, ತಿ.ನರಸೀಪುರ.</u>**

**ಸಿ.ಸಿ. ಸಂಖ್ಯೆ 4001/2023**

| | | |
|---|---|---|
| 3 ನೇ ಆರೋಪಿಯ ಹೆಸರು | ಃ | ಸುರೇಶ, |
| ಪ್ರಾಯ | ಃ | 43 ವರ್ಷ |
| ತಂದೆ | ಃ | ಲೇಟ್.ಕಾಳೇಗೌಡ, |
| ವಾಸ | ಃ | ವಾಸ ನಂ.413, ಆಲನಹಳ್ಳಿ ಗ್ರಾಮ,<br>ಟಿ.ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ. |

**<u>ಆರೋಪಿತನ ಹೇಳಿಕೆ</u>**

ಪ್ರಶ್ನೆಃ-1. ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ-

ಪ್ರಶ್ನೆಃ-2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ?
ಉತ್ತರಃ-

ದಿನಾಂಕಃ 05.08.2024.

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**